# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ.ಪ.ವಿ.–XV /ಅಂಕಪಟ್ಟಿ ವಿತ್ತರಣಾ ವಿಭಾಗ/2020–21.

ಪರೀಕ್ಷಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು –560056.
ದಿನಾಂಕ. 31.8.2020.

## ಸುತ್ತೋಲೆ

ವಿಷಯ; ವಿಶ್ವವಿದ್ಯಾಲಯದಿಂದ ವಿತರಿಸಲಾದ ಅಂಕಪಟ್ಟಿಗಳನ್ನು ಮತ್ತು ಪದವಿ ಪ್ರಮಾಣ ಪತ್ರಗಳನ್ನು ದಾಖಲಾತಿ ಮಾಡಿಕೊಂಡ ನಂತರ ವಿದ್ಯಾರ್ಥಿಗಳಿಗೆ ವಿತರಿಸುವ ಬಗ್ಗೆ.

ಉಲೇಖ: 1. ದಿನಾಂಕ: 19.03.2020ರಂದು ನಡೆದ 152ನೇ ಸಿಂಡಿಕೇಟ್ ಸಭೆಯ ನಡವಳಿಗಳು.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 29.08.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಕೆಲವು ವಿದ್ಯಾರ್ಥಿಗಳಿಂದ, ಪೋಷಕರಿಂದ, ಬಲ್ಲ ಮೂಲಗಳಿಂದ ಬೆಂಗಳೂರು ವಿಶ್ವವಿದ್ಯಾಲಯ ವಿಭಾಗಗಳಲ್ಲಿ /ಸಂಯೋಜನೆಗೊಂಡ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನಿರ್ವಹಿಸುತ್ತಿಲ್ಲವೆಂದು ತಿಳಿದುಬಂದಿರುತ್ತದೆ. ಆದ್ದರಿಂದ, ತಮ್ಮ ವಿಭಾಗದಲ್ಲಿ / ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಪ್ರಕಟಿಸಿದ ಫಲಿತಾಂಶದೊಂದಿಗೆ ಪರಿಶೀಲಿಸಿ, ಪಡೆದಿರುವ ಅಂಕಗಳನ್ನು ಮತ್ತು ಪದವಿ ಪ್ರಮಾಣ ಪತ್ರಗಳ ವಿವರಗಳನ್ನು ವಿಭಾಗಗಳಲ್ಲಿ / ಕಾಲೇಜಿನಲ್ಲಿ ತೆರೆದಿರುವ ದಾಖಲಾತಿ ಪುಸ್ತಕದಲ್ಲಿ ನಮೂದಿಸಿ, ದೃಡೀಕರಿಸಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಫಲಿತಾಂಶ ಅಥವಾ ಅಂಕಪಟ್ಟಿ ಅನಿವಾರ್ಯ ಕಾರಣಗಳಿಂದ ಬರದಿದ್ದರೆ ಅಂತಹ ವಿದ್ಯಾರ್ಥಿಗಳ ಮನವಿಯನ್ನು ನೇರವಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ರವಾನಿಸಿದರೆ ಪರಿಗಣಿಸುವುದಿಲ್ಲ, ವಿಭಾಗದ/ಕಾಲೇಜಿನಲ್ಲಿ ನಿರ್ವವಹಿಸಲಾಗಿರುವ ದಾಖಲಾತಿಗಳನ್ನು ಪರಿಶೀಲಿಸಿ ಯಾವ ಪರೀಕ್ಷೆ, ಯಾವ ಸೆಮಿಸ್ಟರ್‌ಗಳ /ಫಲಿತಾಂಶ ಅಥವಾ ಅಂಕಪಟ್ಟಿ ಬಂದಿಲ್ಲ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿ ಮುಖ್ಯಸ್ಥರುಗಳು/ ಪ್ರಾಂಶುಪಾಲರುಗಳು ಸೂಕ್ತ ದಾಖಲೆ/ ಶಿಫಾರಸ್ಸುಗಳೊಂದಿಗೆ ಫಲಿತಾಂಶ ಪ್ರಕಟವಾದ ದಿನದಿಂದ/ ಅಂಕಪಟ್ಟಿಗಳು ಬಿಡುಗಡೆಯಾದ ದಿನದಿಂದ 15 ದಿನಗೊಳಗಾಗಿ ನೇರವಾಗಿ ಮನವಿ ಸಲ್ಲಿಸತಕ್ಕದ್ದು. 15 ದಿನಗಳ ನಂತರ ಬರುವ ಮನವಿಯನ್ನು ಪರಿಗಣಿಸುವುದಿಲ್ಲವೆಂದು ತಿಳಿಸಲಾಗಿದೆ.

ಪ್ರತಿ ಸೆಮಿಸ್ಟರ್ ಅಂತ್ಯದಲ್ಲಿ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ತಮ್ಮ ವಿಭಾಗದ/ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ, ಪ್ರಕಟಿಸಿರುವ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ, ಪ್ರಕಟಿಸಿದ ಆಂತರಿಕ ಅಂಕಗಳನ್ನು Upload ಮಾಡಿದ ನಂತರ ಆಂತರಿಕ ಅಂಕಗಳನ್ನು Download ಮಾಡಿ ಮತ್ತೆ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಕಡ್ಡಾಯವಾಗಿರುತ್ತದೆಂದು ಸೂಚಿಸಲಾಗಿದೆ.

31/8/2020
ಕುಲಸಚಿವರು (ಮೌ)

**ಸೂಚನೆ:-** ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಅಂಕಪಟ್ಟಿಗಳು, 54ನೇ ವಾರ್ಷಿಕ ಘಟಿಕೋತ್ಸವ ಮತ್ತು 54ನೇ ಮಿನಿ ಘಟಿಕೋತ್ಸವದ ಪದವಿ ಪ್ರಮಾಣ ಪತ್ರಗಳು ಸಿದ್ಧವಿರುತ್ತದೆ. ಮುಖ್ಯಸ್ಥರುಗಳು/ ಪ್ರಾಂಶುಪಾಲರುಗಳು ತಾವು ನಿಯೋಜಿಸಿರುವ ಕೋ-ಆರ್ಡಿನೇಟರ್‌ಗಳನ್ನು ಪರೀಕ್ಷಾ ವಿಭಾಗ, ವಿತ್ತರಣಾ ವಿಭಾಗಕ್ಕೆ ಕಳುಹಿಸಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ತಿಳಿಸಲಾಗಿದೆ.

ಗೆ,
ಮುಖ್ಯಸ್ಥರುಗಳು,ಬೆಂಗಳೂರು ವಿಶ್ವವಿದ್ಯಾಲಯ/ಪ್ರಾಂಶುಪಾಲರುಗಳು,
ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳು,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಪ್ರತಿ:- 1. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳು/ ಕುಲಸಚಿವರು/ / ಕುಲಸಚಿವರು (ಮೌಲ್ಯಮಾಪನ) /ವಿತ್ತಾಧಿಕಾರಿಗಳು ಬೆಂ.ವಿ.ವಿ.ಬೆಂ.
2. ಉಪಕುಲಸಚಿವರುಗಳು / ಸಹಾಯಕ ಕುಲಸಚಿವರು/ ಎಲ್ಲಾ ಅಧೀಕ್ಷಕರು, ಪರೀಕ್ಷಾ ವಿಭಾಗ ಬೆಂ.ವಿ.ವಿ.ಬೆಂ.
3. ಶ್ರೀಮತಿ ಸುಜಾತ, , System Analysist, E-Governance cell, JBC,BUB.
4. ಶ್ರೀ ಮಧುಕರ್, System Analysist I/C, Computer section ಪರೀಕ್ಷಾ ವಿಭಾಗ ಬೆಂ.ವಿ.ವಿ.ಬೆಂ.
5. ಶ್ರೀ ಪ್ರಧಾನ್, ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರ ಮುದ್ರಣ ವಿಭಾಗ, ಪರೀಕ್ಷಾ ವಿಭಾಗ ಬೆಂ.ವಿ.ವಿ.ಬೆಂ.
6 ಶ್ರೀ ಮಧುಕರ್, [illegible], PB, BUB